**Penn Libraries**
**University of Pennsylvania** **Penn History Review**
**Article 5**

# Mahatma Gandhi's Vision for the Future of India
# ಭಾರತದ ಭವಿಷ್ಯವನ್ನು ಕುರಿತ ಮಹಾತ್ಮ ಗಾಂಧಿಯವರ ದೃಷ್ಟಿಕೋನ
# ಪ್ರಜ್ಞಾವಂತ ಅರಾಜಕತೆಯ ಪಾತ್ರ

ಜೋಸೆಫ್ ಎಸ್. ಫ್ರೈಡ್‌ಮನ್

ಸಂಪುಟ ೧೬
ಸಂಚಿಕೆ ೧ ಚಳಿಗಾಲ ೨೦೦೮

ಮಹಾತ್ಮಾ ಗಾಂದಿಯವರು ಇಪ್ಪತ್ತನೆಯ ಶತಮಾನದ ಪರಿವರ್ತನಶೀಲ ರಾಜಕೀಯ ಮತ್ತು ಆಧ್ಯಾತ್ಮಿಕ ನಾಯಕರಲ್ಲೊಬ್ಬರಾಗಿದ್ದರು ಎಂಬ ವಿಚಾರವನ್ನು ಯಾರೂ ಅಲ್ಲಗಳೆಯಲಾರರು. ಅವರ ಹಲವು ಗಮನಾರ್ಹ ಕೊಡುಗೆಗಳಲ್ಲಿ ಒಂದು ಸತ್ಯಾಗ್ರಹ; ಗಾಂಧಿಯವರನ್ನು ಸತ್ಯಾಗ್ರಹದ ಮಾರ್ಗಪ್ರವರ್ತಕರು ಎಂಬುದು ಸರಿಯಾಗಿಯೇ ಇದೆ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಾಮೂಹಿಕ ನಾಗರಿಕ ಕಾನೂನುಭಂಗ(mass civil disobedience)ದ ಮೂಲಕ ನಿರಂಕುಶ ಪ್ರಭುತ್ವವನ್ನು ವಿರೋಧಿಸಿ, ಆಗಸ್ಟ್ ೧೯೪೭ರಲ್ಲಿ ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸಿಕೊಳ್ಳಲು ಸಹಾಯಕವಾದ ಒಂದು ಅತಿಶಯ(transcendent) ಸಂದೇಶಕ್ಕೆ ಅವರು ದನಿಯಾದರು. ಅಂಗೀಕೃತವಾದ ಚರಿತ್ರೆಯ ಗ್ರಂಥಗಳಲ್ಲಿ ಮರೆಯಲಾಗಿರುವ ಅಥವಾ ಅಲಕ್ಷಿಸಲ್ಪಟ್ಟಿರುವ ಸಂಗತಿಗಳೆಂದರೆ ಅವರ ಆದರ್ಶದ ಸೆಳಹುಗಳು. ಅವು ಅವರ ಸಾರ್ವತ್ರಿಕ ಸ್ವೀಕಾರಕ್ಕೆ ತೊಡಕುಗಳಾಗಿದ್ದವು ಮತ್ತು ಭಾರತ ರಾಷ್ಟ್ರದ ವೈಚಾರಿಕ ತಳಹದಿಯಲ್ಲಿ ಗೊಂದಲ ಮೂಡಿಸುವಂತೆ ಇದ್ದವು. ಅವರ ಭಾರತದ ಭವಿಷ್ಯದ ಕಣಸು ತುಂಬಾ ಅಸಾಂಪ್ರದಾಯಕವಾಗಿತ್ತು. ಗಾಂದಿಯವರ ಆದರ್ಶ ಪ್ರಭುತ್ವದಲ್ಲಿ ಪ್ರತಿನಿಧಿ ಸರ್ಕಾರವಿಲ್ಲ, ಸಂವಿಧಾನವಿಲ್ಲ, ಸೈನ್ಯ ಅಥವಾ ಪೊಲೀಸ್ ಬಲವಿಲ್ಲ; ಔದ್ಯೋಗೀಕರಣ(industrialization)ವಿಲ್ಲ, ಯಂತ್ರಗಳಿಲ್ಲ, ಆಧುನಿಕ ನಗರಗಳಂತೂ ಇಲ್ಲವೇ ಇಲ್ಲ. ಅಲ್ಲಿ ಬಂಡವಾಳಶಾಹಿ(capitalism) ಇರುವುದಿಲ್ಲ, ಸಮತಾವಾದ(communism) ಇರುವುದಿಲ್ಲ, ಶೋಷಣೆ ಇರುವುದಿಲ್ಲ, ಧಾರ್ಮಿಕ ಹಿಂಸೆ ಇರುವುದಿಲ್ಲ. ಬದಲಾಗಿ ಭವಿಷ್ಯದ ಭಾರತ ರಾಷ್ಟ್ರವು ಭೂತಕಾಲದ ಭಾರತದ ಮಾದರಿ-ಯಲ್ಲಿರುತ್ತದೆ. ಅದರ ಲಕ್ಷಣಗಳೆಂದರೆ, ಕೃಷಿ ಆರ್ಥಿಕತೆ(agrarian economy), ಸ್ವಾವಲಂಬೀ ಗ್ರಾಮಗಳು, ನಾಗರಿಕ ಕಾನೂನುಗಳು ಇಲ್ಲದಿರುವುದು ಮತ್ತು ಜನರ ಸಾಮುದಾಯಿಕ ಇಚ್ಛಾಶಕ್ತಿಯನ್ನು ಬಿಂಬಿಸುವ ನೈತಿಕ ಚೌಕಟ್ಟು. ಅನೇಕ ರೀತಿಗಳಲ್ಲಿ, ಅವರ ಆಧುನಿಕ ಪೂರ್ವ, ನೈತಿಕವಾಗಿ ಪ್ರಜ್ಞಾವಂತವಾದ, ಪ್ರಭುತ್ವರಹಿತ ಭಾರತಕ್ಕೆ ನೀಡುವ ಕರೆಯಲ್ಲಿ, ಗಾಂಧಿಯವರ ಬರಹಗಳು ಅರಾಜಕತಾವಾದೀ ತತ್ವ(anarchic principles)ಗಳನ್ನು ಬಿಂಬಿಸುತ್ತವೆ[i]. ಬ್ರಿಟಿಷರಿಂದ ಭಾರತೀಯರಿಗೆ ಅಧಿಕಾರ ಹಸ್ತಾಂತರಕ್ಕೆ ನಿಕಟಪೂರ್ವದಲ್ಲಿ ಅವರ ಬರಹಗಳಲ್ಲಿ ಕಾಣುವಂತೆ ಈ ವಿಷಯವನ್ನು ಕುರಿತಂತೆ ಅವರ ನಿರ್ದಿಷ್ಟ ವಿಚಾರಗಳು ಸ್ವಲ್ಪಮಟ್ಟಿಗೆ ಬದಲಾದವು. ಆದರೆ ಅವರ ವಿಚಾರಗಳಲ್ಲಿರುವ ಸಾಕಷ್ಟು ನಿರಂತರತೆಯಿಂದ ಹೀಗೆ ವಿವರಿಸುವುದು, ಅಂದರೆ ಅವರನ್ನು ಅರಾಜಕತಾವಾದಿ (anarchist) ಎನ್ನುವುದು, ಸಮರ್ಥನೀಯವಾಗುತ್ತದೆ.

ಅನೇಕ ವಿದ್ವಾಂಸರು ಗಾಂಧಿಯವರ ಇಂತಹ ಚಿತ್ರಣವನ್ನು ಒಪ್ಪಲು ಹಿಂಜರಿಯುತ್ತಾರೆ. ಏಕೆಂದರೆ ಭವಿಷ್ಯವನ್ನು ಕುರಿತ ಅವರ ವಿಚಾರಗಳು ಕೆಲವೊಮ್ಮೆ ಇಬ್ಬಗೆಯದಾಗಿದ್ದವು. ಭಾರತದ ಪ್ರತಿಷ್ಠಿತ ನಾಯಕರೂ, ಪ್ರಥಮ ಪ್ರಧಾನ ಮಂತ್ರಿಗಳೂ ಆಗಿದ್ದ ಜವಾಹರಲಾಲ್ ನೆಹರೂ ಅವರು ಸ್ಪಷ್ಟವಾಗಿ ಎಂತಹ ಸರ್ಕಾರದ ಗುರಿ ಇರಬೇಕು ಎಂಬುದರ ಬಗೆಗೆ ಗಾಂಧಿಯವರದು "ಆನಂದದಾಯಕ

ಅಸ್ಪಷ್ಟತೆ(delightful vagueness)" ಎಂದು ನೆನೆಯುತ್ತಿದ್ದರು[ii]. ಆದರೂ ಭವಿಷ್ಯದ ಬಗೆಗಿನ ಗಾಂಧಿಯವರ ವಿಚಾರಗಳನ್ನು ಸಂಶ್ಲೇಷಿಸಲು ಸಾಕಷ್ಟು ಪುರಾವೆಗಳಿವೆಯೆಂಬುದು ಈ ಪ್ರಬಂಧದಲ್ಲಿನ ನನ್ನ ವಾದವಾಗಿದೆ. ಅವರ ವಿಚಾರಗಳ ಸಂಪೂರ್ಣ ಅಭಿವ್ಯಕ್ತಿ ೧೯೦೯ರಲ್ಲಿ ಪ್ರಕಟಗೊಂಡ *ಹಿಂದ್ ಸ್ವರಾಜ್* ಕೃತಿಯಲ್ಲಿದೆ. ಈ ಕೃತಿಯಲ್ಲಿ ಅವರು "ರಾಜಕೀಯ ಸಿದ್ಧಾಂತದ ಒಂದು ಸಮರ್ಥನೀಯ ಕೃತಿಯ ಸೃಷ್ಟಿಗೆ ಅತ್ಯಂತ ಸಮೀಪ ಬಂದರು"[iii] ಎನ್ನಲಾಗುತ್ತದೆ. ಕೆಲವೊಮ್ಮೆ ಸ್ವಯಂ-ವಿರೋಧಗಳಿಂದ ಕೂಡಿದ್ದಾಗ್ಯೂ ಈ ಕೃತಿ ಪ್ರಭುತ್ವ (state), ಸಮಾಜ ಮತ್ತು ರಾಷ್ಟ್ರದ ಪರಿಕಲ್ಪನೆಗಳನ್ನು ಕುರಿತ ಅವರ ವಿಚಾರಗಳ ಕ್ರಮಬದ್ಧ ಪ್ರತಿಪಾದನೆಯಾಗಿದೆ. ಈ ಆದ್ಯ ಕೃತಿಯಲ್ಲದೆ ಅವರ ಆತ್ಮಚರಿತ್ರೆ, ಭಾಷಣಗಳು, ಸಂದರ್ಶನಗಳು, ಕರಪತ್ರಗಳು, ಲೇಖನಗಳು ಎಲ್ಲವೂ ಸೇರಿ ಅವರ ರಾಜಕೀಯ ಆಶಯಗಳ ಒಂದು ವಿಹಂಗಮ ನೋಟವನ್ನು ನೀಡುತ್ತವೆ. ಇವೆಲ್ಲ ಸಾಮಗ್ರಿಯೂ ಸೇರಿ *Collected Works* ಎಂಬ ತೊಂಭತ್ತು ಬೃಹತ್ ಸಂಪುಟಗಳ ಅಗಾಧ ಕೃತಿಯಾಗುತ್ತದೆ[iv]. ಈ ಜ್ಞಾನ ಸಮೂಹವನ್ನು ಪರಿಗಣಿಸಿ ಗಾಂಧಿಯವರ ಭವಿಷ್ಯದ ಯೋಜನೆಯನ್ನು ಸುಸಂಬದ್ಧವಾಗಿ ಸಾರಾಂಶೀಕರಿಸುವುದು ಸಾಧ್ಯ. ಈ ಪ್ರಬಂಧವು ಅವರ *ಹಿಂದ್ ಸ್ವರಾಜ್* ಕೃತಿಯನ್ನು ಸಮಗ್ರವಾಗಿಯೂ, ಅದಕ್ಕಿಂತ ಕಡಿಮೆ ವಿವರದಲ್ಲಿ ಅವರ *Collected Works* ಕೃತಿಯನ್ನು ಪರಿಶೀಲಿಸಲಿದೆ. ಗಾಂಧಿ ಅವರು ವ್ಯಕ್ತಿಗತ ಅರಾಜಕತೆಯನ್ನು ಹಂಬಲಿಸಿದ್ದರು ಎಂಬ ವಾದವನ್ನು ಸಮರ್ಥಿಸುವ ನಿಟ್ಟಿನಲ್ಲಿ, ಅವರ ಆರ್ಥಿಕ ಪರಿಕಲ್ಪನೆಗಳು, ರಾಜಕೀಯ ವಿಚಾರಗಳು ಹಾಗೂ ಸಾಮಾಜಿಕ ಚಿಂತನೆಗಳ ಸ್ಪಷ್ಟೀಕರಣವು ಇದರ ಉದ್ದೇಶವಾಗಿದೆ. ವ್ಯಕ್ತಿಗತ ಅರಾಜಕತೆ (individualist anarchy) ಎಂದರೆ ಸರಕಾರೀ ನಿಯಂತ್ರಣವನ್ನು ವಿರೋಧಿಸುವ, ಖಾಸಗೀ ಒಡೆತನವನ್ನು ಒಪ್ಪದ ಒಂದು ಸಾಮಾಜಿಕ ವ್ಯವಸ್ಥೆ.

ಗಾಂಧಿ ಅರಾಜಕತೆಯನ್ನು ಅದರದ್ದೇ ಗುರಿ ಹೊಂದಿದ ವ್ಯವಸ್ಥೆ ಎಂದು ಪ್ರತಿಪಾದಿಸಲಿಲ್ಲ; ಆದರೆ ಅದು ಪ್ರಾಮಾಣಿಕ ಸ್ವಯಂ ಆಳ್ವಿಕೆಗೆ ಅಥವಾ ಸ್ವರಾಜ್‌ಗೆ ಅತ್ಯಗತ್ಯವಾದ ಹಲವು ಪರಿಸ್ಥಿತಿಗಳಲ್ಲಿ ಒಂದು ಎಂಬುದು ಅವರ ಅಭಿಮತ. —ಸಾಮಾಜಿಕ-ಆರ್ಥಿಕ ಅಥವಾ ರಾಜಕೀಯ ಬದಲಾವಣೆಗಳಿಗೂ ಮೊದಲು ಮಾಡಬೇಕಾದ ಭಾರತದ ತತ್‌ಕ್ಷಕ್ಷಣದ ಕಾರ್ಯವೆಂದರೆ, —ಸ್ವರಾಜ್‌ನ ಸಾಧನೆ. ಇದಕ್ಕೆ ಬೇಕಾದುದು ಸರಕಾರದ ಸ್ವಯಂ ಆಳ್ವಿಕೆ ಮತ್ತು ಒಬ್ಬರ ಮನಸ್ಸು ಮತ್ತು ಭಾವತೀವ್ರತೆಗಳ ಮೇಲೆ ಸ್ವಯಂ ಆಳ್ವಿಕೆ. ದುರಾಸೆ, ಹಿಂಸೆ ಮತ್ತು ಕೋಮು ಸಂಘರ್ಷಗಳನ್ನು ಕಡಿಮೆ ಮಾಡುವುದರಿಂದ ಸ್ವರಾಜ್, ಅಭ್ಯುದಯ, ಅನುಕಂಪ, ಮತ್ತು ವ್ಯಕ್ತಿಗತ ಆನಂದವನ್ನು ಹೆಚ್ಚಿಸುತ್ತದೆ. ಬ್ರಿಟಿಷರು ಭಾರತವನ್ನು ಬಿಟ್ಟು ಹೋದಾಗ ಭಾರತವು ಕೇವಲ ನಾಮಮಾತ್ರದ ಸ್ವರಾಜ್ಯವನ್ನು ಪಡೆಯುತ್ತದೆ; ಅದರ ಆಧ್ಯಾತ್ಮಿಕ ಪುನಃಶ್ಚೇತನ ಆಗುವವರೆಗೂ ಅದು ನಿಜವಾದ ಸ್ವರಾಜ್ಯವನ್ನು ಪಡೆಯದು ಎಂಬುದಾಗಿ ಗಾಂಧಿಯು *ಹಿಂದ್ ಸ್ವರಾಜ್*‌ನಲ್ಲಿ ಬರೆಯುತ್ತಾರೆ. ಭಾರತದ ಮುಂದಿನ ಯಾವುದೇ ಪ್ರಭುತ್ವದ ಪೂರ್ವಭಾವೀ ಅಗತ್ಯ ಎಂದರೆ ಆತ್ಮ ಸುಧಾರಣೆ. ಈ ಪರಿವರ್ತನೆಯು ಅತ್ಯಂತ ಪರಿಣಾಮಕಾರಿಯಾಗಿ ಆಗಬಹುದಾದುದು ಒಂದು ಅರಾಜಕ ವಾತಾವರಣದಲ್ಲಿ ಮಾತ್ರ.[v] ಆಧ್ಯಾತ್ಮಿಕ ಪುನರುಜ್ಜೀವನವು ಸರಕಾರವನ್ನು ಅನಗತ್ಯಗೊಳಿಸುತ್ತದೆ. ಒಂದು ನಾಗರಿಕ ಸರಕಾರದ ಆಮಿಷಗಳು ಅಗತ್ಯಮೀರಿದ ಸಂಗತಿ. ಏಕೆಂದರೆ ಅದು ಇಲ್ಲದೆಯೇ ಅತ್ಯಾನಂದದ ಜೀವನ ಸಾಧ್ಯ. ಸತ್ಯಾಗ್ರಹ(ಅಹಿಂಸಾತ್ಮಕ ಆಧ್ಯಾತ್ಮಿಕ ಪ್ರತಿರೋಧ(non-violent spiritual resistance)ದ ಮೂಲಕ ಭಾರತೀಯರು ಅವರ ಪೂರ್ವಿಕರ ನಿಶ್ಚಿತವಾದ ಆಧ್ಯಾತ್ಮಿಕ- ಪ್ರಜ್ಞಾವಂತ(spiritually enlightened) ಜೀವನವನ್ನು ನಡೆಸಬಹುದು.

ಸರಕಾರವು ಒಂದು ನೈತಿಕ ಅಸ್ತಿತ್ವದ ಸಾಧನೆಯ ವಾಹಕವಾಗುವುದಕ್ಕಿಂತ ನೈತಿಕ ಅಸ್ತಿತ್ವಕ್ಕೆ ಒಂದು ಅಡಚಣೆಯಂತಿತ್ತು. ಆಧುನಿಕ ನಾಗರಿಕತೆ(modern civilization)ಯೊಂದಿಗಿನ ಅದರ ಸಂಪರ್ಕಗಳಿಂದಾಗಿ ಸರಕಾರವು ಎಂತಹ ಭವಿಷ್ಯದ ಭರವಸೆ ನೀಡುತ್ತದೆ ಎಂದರೆ ಅದು ಗಾಂಧಿಯವರ ಪೂರ್ವಕಾಲದ ಪ್ರಜ್ಞಾವಂತ ಭಾರತಕ್ಕೆ ಅಯೋಗ್ಯವಾಗಿರುತ್ತದೆ. ಪಾಶ್ಚಾತ್ಯ ಸರಕಾರವು ಸಾಂಸ್ಕೃತಿಕವಾಗಿ ದುರಭಿಮಾನಿಯೂ (culturally chauvinistic) ಮತ್ತು ನೈತಿಕವಾಗಿ

ಆಕ್ರಮಣಕಾರಿಯೂ ಆದುದು. ಅವರು *ಹಿಂದ್ ಸ್ವರಾಜ್*ನಲ್ಲಿ ಬರೆಯುತ್ತಾರೆ, "ನಾವು ಆಧುನಿಕ ನಾಗರೀಕತೆಗೆ ಬಲಿಯಾಗಿರುವುದು ಭಾರತದ ದುರಾದೃಷ್ಟಕ್ಕೆ ಕಾರಣವೇ ಹೊರತು ಬ್ರಿಟಿಷರು ಇದಕ್ಕೆ ಕಾರಣರಲ್ಲ."[vi] ಆಧುನಿಕ ನಾಗರೀಕತೆಯು ಅದರ ಬಲಿಷ್ಠ ಬಾಹುಗಳ ರಾಷ್ಟ್ರೀಯ ಸರಕಾರ(national government)ದ ಕಟ್ಟಳೆಯೊಂದಿಗೆ ಭಾರತೀಯರನ್ನು ತಮ್ಮ ಅಗತ್ಯ ಮತ್ತು ಬಯಕೆಗಳನ್ನು ಮಿತಿಗೊಳಿಸುವುದರಿಂದ, ಶ್ರಮದ ಘನತೆಯನ್ನು ಸಾಧಿಸುವುದರಿಂದ, ಐಶ್ವರ್ಯದ ಧರ್ಮದರ್ಶಿತ್ವ(trusteeship of wealth)ದಿಂದ ತಡೆದಿದೆ. ೧೯೨೫ರಲ್ಲಿ ಗಾಂಧಿ ಈ ವಿಚಾರವನ್ನು ಒತ್ತಿ ಹೇಳಿದರು: "ನಾಗರೀಕತೆ ಎಂದು ಹೇಳಲಾಗುವ ಪಾಶ್ಚಾತ್ಯ ನಾಗರೀಕತೆ ನನಗೆ ಜಿಗುಪ್ಸೆ ಮೂಡಿಸುತ್ತದೆ."[vii] ಆಧುನಿಕ ನಾಗರೀಕತೆ ವಸ್ತುಲೋಲುಪತೆ(materialism)-ಯನ್ನು ಬೆಳೆಸುತ್ತದೆ; ಅರ್ಹತೆ ಮತ್ತು ಐಶ್ವರ್ಯದ ಹುಸಿ ಆದರ್ಶಗಳನ್ನು ಬಿತ್ತುತ್ತದೆ ಮತ್ತು ಹಿಂಸೆ ಹಾಗೂ ಪೈಪೋಟಿಗೆ ಕಾರಣವಾಗುತ್ತದೆ. ಇದಕ್ಕೆ ವ್ಯತಿರಿಕ್ತವಾಗಿ ಸತ್ಯಾಗ್ರಹವು ಜನರು ಕಣ್ಣುಕುಕ್ಕುವ ಬಳಕೆಗಾಗಿ ದುಡಿಯದೆ ತಮ್ಮ ಅತ್ಯಗತ್ಯಗಳನ್ನು ತೃಪ್ತಿಪಡಿಸಿಕೊಳ್ಳಲು ದುಡಿಯುವ ಸರಳ ಜೀವನಕ್ರಮವನ್ನು ಜಾರಿಗೆ ತರುತ್ತದೆ ತನ್ನದೇ ಪರಂಪರೆಯಲ್ಲಿ ದೊರಕುವ ನೈತಿಕ ಸಂಪನ್ಮೂಲಗಳಿಂದ ಮಾತ್ರವೇ ಭಾರತವು ಒಂದು ಸ್ವತಂತ್ರ ರಾಷ್ಟ್ರವಾಗಿ ಹೊಸ ಜೀವನ ಪ್ರಾರಂಭಿಸಬಹುದು. ಆಧುನಿಕತೆಯ ಸಂಕೋಲೆಗೆ ಒಳಗಾಗದ ಪ್ರಜ್ಞಾವಂತ ಗ್ರಾಮಗಳಲ್ಲಿ (enlightened villages) 'ನಿಜ'ವಾದ ನಾಗರೀಕತೆಯನ್ನು ಕಾಣಬಹುದು[viii].

## ಗಾಂಧಿಯವರ ಆದರ್ಶೀಕೃತ ಪ್ರಭುತ್ವದ ಆರ್ಥಿಕ ರೂಪುರೇಷೆ
**The Economic Outlines of Gandhi's Idealised State**

ಗಾಂಧಿಯವರು ಒಂದು ಹೊಸ ಭಾರತದ ಕಲ್ಪನೆಯನ್ನು ಮುಂದಿಟ್ಟ ಮಾರ್ಗಗಳಲ್ಲಿ ಒಂದೆಂದರೆ ಆರ್ಥಿಕತೆಯ ಬಗೆಗಿನ ಒಂದು ಹೊಸ ದೃಷ್ಟಿಕೋನ. ಈ ದೃಷ್ಟಿಕೋನವು ಶೋಷಣೆಯ ಅತಿರೇಕಗಳ ಬಂಡವಾಳಶಾಹಿಯನ್ನು ಹಾಗೂ ಔದ್ಯೋಗೀಕರಣ(industrialization)ದೊಂದಿಗೆ ಬೆಸೆದುಕೊಂಡಿರುವ ಸಮಾಜವಾದ(socialism)ವನ್ನು ತಿರಸ್ಕರಿಸುತ್ತದೆ. ಶೋಷಣೆ ಹಾಗೂ ತಡೆಯಿಲ್ಲದ ಸ್ಪರ್ಧೆಗೆ ಭರಪೂರ ಅವಕಾಶಗಳಿರುವ ಬಂಡವಾಳಶಾಹಿ ಸಮಾಜವನ್ನು, ಮುಕ್ತ ಮಾರುಕಟ್ಟೆಯ(*laissez-faire*) ಮತ್ತು ಕೇನ್ಸಿಯನ್(Keynesian) ಅರ್ಥಶಾಸ್ತ್ರದ ತತ್ವಗಳನ್ನು ಅವರು ತಿರಸ್ಕರಿಸಿದರು.[ix] ಸರಕುಗಳು ಮತ್ತು ಬಂಡವಾಳದ ವಿನಿಮಯದ ಸ್ವಾತಂತ್ರ್ಯವಿರುವ ವಿಶ್ವ ಮಾರುಕಟ್ಟೆಯ ಮೇಲೆ ಭಾರತ ಅವಲಂಬಿಸಬಾರದು ಎಂದು ಅವರು ವಾದಿಸಿದರು. ಸಮಾಜವಾದವು ಇನ್ನು ಸಹನೀಯವಾಗಿಲ್ಲ. ೧೯೪೦ರಲ್ಲಿ ನೀಡಿದ ಒಂದು ಸಂದರ್ಶನದಲ್ಲಿ ಅವರು ಸಮಾಜವಾದಕ್ಕೆ ತಮ್ಮ ಆಕ್ಷೇಪಣೆಯನ್ನು ಸ್ಪಷ್ಟವಾಗಿ ಹೊರಹಾಕಿದರು: "ಪಂಡಿತ್ ನೆಹರೂ ಅವರು ಔದ್ಯೋಗೀಕರಣವನ್ನು ಬಯಸುತ್ತಾರೆ ಏಕೆಂದರೆ ಅದರ ಸಮಾಜೀಕರಣದಿಂದ ಅದನ್ನು ಬಂಡವಾಳಶಾಹಿಯ ಕೇಡುಗಳಿಂದ ಮುಕ್ತಗೊಳಿಸಬಹುದು ಎಂದು. ಕೇಡುಗಳು ಔದ್ಯೋಗೀಕತೆ(industrialism)ಗೆ ಅಂತರ್ಗತ ಮತ್ತು ಯಾವುದೇ ಪ್ರಮಾಣದ ಸಮಾಜೀಕರಣವೂ ಆ ಕೇಡುಗಳನ್ನು ನಿವಾರಿಸಲಾರದು ಎಂಬುದು ನನ್ನ ಸ್ವಂತ ದೃಷ್ಟಿಕೋನ.[x]" ಆಧುನಿಕ ನಾಗರೀಕತೆಯ ಸಾರತತ್ವ ಗುರುತುಗಳಾದ (quintessential hallmarks) ಬಂಡವಾಳಶಾಹಿ ಮತ್ತು ಸಮಾಜವಾದವು ಮನುಷ್ಯನನ್ನು ಅವನ ಐಷಾರಾಮಿತನ(luxury)ದ ಮತ್ತು ಸ್ವಯಂ ಲೋಲುಪ (self-indulgent) ಹಪಹಪಿಕೆಯಲ್ಲಿ ಬಂಧಿಸಿಟ್ಟಿವೆ. ಈ ವಿಷಯದಲ್ಲಿ ಗಾಂಧಿಯವರ ಕಲ್ಪನೆಗಳು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಸಹೋದ್ಯೋಗಿಗಳನ್ನು, ಅದರಲ್ಲೂ ವಿಶೇಷವಾಗಿ ನೆಹರೂ ಅವರನ್ನು ದಿಗ್ಭ್ರಮೆ ಗೊಳಿಸಿದ್ದವು. ತಮ್ಮ ಆತ್ಮಚರಿತ್ರೆಯಲ್ಲಿ ನೆಹರೂ ಅವರು ಗಾಂಧಿಯವರ ಆರ್ಥಿಕ ವಿಚಾರಗಳ ಬಗೆಗೆ "ಸಂಪೂರ್ಣ ದೋಷಯುಕ್ತ ...ಮತ್ತು ಸಾಧಿಸಲಸಾಧ್ಯ"[xi] ಎಂದು ಬರೆದಿದ್ದಾರೆ. ಹೀಗೆ ಸಕಾರಾತ್ಮಕ ಧೃಡೀಕರಣ

ಸಿಗದಿದ್ದಾಗಲೂ ಗಾಂಧಿ ತಮ್ಮ ಅಸಾಂಪ್ರ-ದಾಯಿಕವಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಿಚಾರಗಳನ್ನು ವ್ಯಾಪಕವಾಗಿ ಪ್ರಕಟಿಸುತ್ತಿದ್ದರು.

ಬಂಡವಾಳಶಾಹಿ ಮತ್ತು ಸಮಾಜವಾದವನ್ನು ತಿರಸ್ಕರಿಸಿದ್ದ ಗಾಂಧಿಯವರ ಭಾಷಣಗಳು ಮತ್ತು ಬರಹಗಳು ಸೂಚಿಸುವುದೆಂದರೆ ಅವರು ಚಿತ್ರಿಸಿಕೊಂಡಿದ್ದ ಭಾರತದ ಪ್ರಭುತ್ವವು ಸ್ವಾವಲಂಬನೆಯನ್ನು ಎತ್ತಿ ಹಿಡಿಯುವ ರೂಢಿಯದಲ್ಲದ ಆರ್ಥಿಕತೆಯನ್ನು ಆಧರಿಸಿದ ಪ್ರಭುತ್ವ. ಅವರು ಮತೀಯ ಸಹಕಾರ(communal cooperation) ಮತ್ತು ದೈಹಿಕ ಶ್ರಮ ಇವುಗಳನ್ನು ಅವಲಂಬಿಸಿದ ಸ್ವಾವಲಂಬೀ ರಾಷ್ಟ್ರವನ್ನು ಅಪೇಕ್ಷಿಸಿದ್ದರೆಂದು ಕಾಣುತ್ತದೆ. ಇದು ಅವರ *Collected Works*ನಲ್ಲಿ ಸೂಚಿತವಾಗಿದೆ. ಅಲ್ಲಿ ಅವರು ಸಮಾಜವು ಖಾದಿಯ ಉತ್ಪಾದನೆಯ ಸುತ್ತ ವ್ಯವಸ್ಥೆಗೊಂಡಿರಬೇಕೆಂದು ಹೇಳುತ್ತಾರೆ. "ಖಾದಿಯು ಮಾತ್ರವೇ ಭಾರತದ ಕೋಟ್ಯಾಂತರ ಗ್ರಾಮಸ್ಥರ ದೃಷ್ಟಿಯಿಂದ ಎಂದಿನವರೆಗೆ ನಿಜವಾದ ಆರ್ಥಿಕ ಪ್ರಸ್ತಾಪವಾಗುತ್ತದೆ ಎಂದರೆ, ಹದಿನಾರು ವರ್ಷ ಮೀರಿದ ಸಮರ್ಥ ದೇಹದ ಪ್ರತಿಯೊಬ್ಬ ವ್ಯಕ್ತಿಗೂ, ಅದು ಹೆಣ್ಣಿರಲಿ ಅಥವಾ ಗಂಡಿರಲಿ, ಅವರ ಜಮೀನು, ಗುಡಿಸಲು ಅಥವಾ ಕಾರ್ಖಾನೆಯಲ್ಲಿ, ಪ್ರತಿಯೊಂದು ಗ್ರಾಮದಲ್ಲಿ, ಅದಕ್ಕಿಂತ ಉತ್ತಮವಾದ ಮತ್ತು ತೃಪ್ತಿಕರ ವೇತನ ದೊರೆಯುವ ಕೆಲಸದ ವ್ಯವಸ್ಥೆ ಬರುವವರೆಗೆ."[xii] ಅವರು ಆಸ್ತಿಯ ಸಾರ್ವಜನಿಕ ಒಡೆತನವನ್ನು ಎತ್ತಿ ಹಿಡಿದು ಖಾಸಗೀ ಒಡೆತನವನ್ನು ತಿರಸ್ಕರಿಸಿದರು: ಆಸ್ತಿಯ ಮಾಲೀಕರು ಎಲ್ಲರ ಹಿತಕ್ಕಾಗಿ ಸಾರ್ವಜನಿಕ ಆಸ್ತಿಯನ್ನು ನೋಡಿಕೊಳ್ಳುವ ಧರ್ಮದರ್ಶಿಗಳು (trustees). ಇದಕ್ಕನುಗುಣವಾಗಿ ಈ ಖಾದಿಯ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ 'ವಸ್ತುರೂಪ'ದ ವೇತನ. ಉದಾಹರಣೆಗೆ ಒಬ್ಬ ಕಮ್ಮಾರನಿಗೆ ಉಪಕರಣಗಳನ್ನು ಮಾಡಿಕೊಟ್ಟಿದ್ದಕ್ಕೆ ಆಹಾರ, ರೈತರಿಗೆ ಬೀಜ ಬಿತ್ತನೆಗೆ ಬೇಕಾದ ಸಲಕರಣೆ ಮುಂತಾಗಿ.[xiii] ಈ ರೀತಿಯ ಆಧುನಿಕ ಪೂರ್ವ ವಿನಿಮಯಕ್ಕೆ ವ್ಯಾಪಕ ಲಾಭಗಳಿವೆ. "ಆದಿಮ ವಿಧಾನಗಳಾದಂತಹ ಕುಟ್ಟುವುದು, ಬೀಸುವುದು ಇವುಗಳಿಗೆ ಹಿಂದಿರುಗುವುದರ ಪಕ್ಷಪಾತಿ ನಾನಲ್ಲ." ಎಂದು ಅವರು ಬರೆಯುತ್ತಾರೆ. ಆದರೆ ಅವರು ಈ ವಿಧಾನಗಳಿಗೆ ಹಿಂದಿರುಗುವ ಕರೆ ನೀಡುತ್ತಾರೆ, "ಏಕೆಂದರೆ ಕೆಲಸವಿಲ್ಲದಿರುವ ಕೋಟ್ಯಾಂತರ ಗ್ರಾಮಸ್ಥರಿಗೆ ಉದ್ಯೋಗ ನೀಡುವ ಬೇರೆ ಮಾರ್ಗವಿಲ್ಲ. "[xiv] ಪರಂಪರೆಗೆ ಒತ್ತು ನೀಡಿದ ಅವರು ಖಾದಿಯ ನೇಯ್ಗೆ ಮತ್ತು ದೈಹಿಕ ಶ್ರಮಗಳನ್ನು ಸ್ವರಾಜ್ಯವನ್ನು ಸಾಧಿಸುವ ಆದರ್ಶ ಮಾರ್ಗಗಳಾಗಿ ಉತ್ತೇಜಿಸಿದರು. ಒಂದು ಜೀವಂತ ಖಾದಿ ಆಧಾರಿತ ಆರ್ಥಿಕತೆಯ ಅಂಗೀಕಾರವು ಶೋಷಣೆ, ಔದ್ಯೋಗೀಕರಣ, ಮತ್ತು ಆಧುನೀಕರಣ(modernization)ವನ್ನು ಕೊನೆಗೊಳಿಸುತ್ತದೆ; ಆಧ್ಯಾತ್ಮಿಕ ಪುನರುಜ್ಜೀವನಕ್ಕೆ ಅಡಚಣೆಯಾಗಿರುವ ನೈತಿಕ ಅಡಚಣೆಗಳನ್ನು ಅದು ನಿವಾರಿಸುತ್ತದೆ ಮತ್ತು ನಿಜವಾದ ಸ್ವರಾಜ್ಯವನ್ನು ಸೃಷ್ಟಿಸುತ್ತದೆ.

ಯಂತ್ರ ಎನ್ನುವುದು ಈ ವಿಚಾರದಲ್ಲಿನ ಒಂದು ಅಂಶವಾಗಿದ್ದು, ಗಾಂಧಿಯವರ ಆದರ್ಶಗಳಿಂದ ದೂರ ಹೋಗುವಿಕೆಯನ್ನು ಪ್ರತಿನಿಧಿಸುತ್ತದೆ. ಯಂತ್ರದ ಸದಾ ಹೆಚ್ಚಾಗುವ ಉತ್ಪಾದಕತೆ ಮತ್ತು ದಕ್ಷತೆಯ ಆಕರ್ಷಣೆಯಿಂದ, ಅದರ ಪ್ರಭಾವಗಳ ಗಂಭೀರ ಪ್ರಸರಣದೊಂದಿಗೆ ಮನುಷ್ಯನ ಸ್ವಾಭಾವಿಕ ಬೆಳವಣಿಗೆಯನ್ನು ಹಾಳುಗೆಡವುತ್ತದೆ. ಯಂತ್ರವು ಬಳಕೆದಾರರ ದಾಹವನ್ನು ಎಷ್ಟು ಪ್ರಮಾಣಕ್ಕೆ ಹೆಚ್ಚಿಸುತ್ತದೆ ಎಂದರೆ ಅದು ಅನಿವಾರ್ಯವಾಗಿ ಶೋಷಣೆ, ನಿರುದ್ಯೋಗ ಮತ್ತು ಅಂತಿಮವಾಗಿ ಬರ ಪರಿಸ್ಥಿತಿಗೆ ಕಾರಣವಾಗುತ್ತದೆಯೆಂದು ಗಾಂಧಿಯವರು ನಂಬಿದ್ದರು. ಇದಕ್ಕೆ ಅವರ ಪರಿಹಾರಮಾರ್ಗವೆಂದರೆ, ಔದ್ಯೋಗೀಕರಣದ ಪರಿಪೂರ್ಣತೆಯಲ್ಲ, ಅದರ ಸಂಪೂರ್ಣ ನಿರ್ಮೂಲನ. ಗಾಂಧಿ ಬರೆಯುತ್ತಾರೆ:

> ಯಂತ್ರವನ್ನು ಒಂದು ವರ ಎಂದು ಸ್ವಾಗತಿಸುವುದಕ್ಕಿಂತ ಅದನ್ನುಒಂದು ಕೇಡು ಎಂದು ನಾವು ನೋಡಬೇಕು... ನಮಗೆ ಯಂತ್ರಗಳನ್ನು ಆವಿಷ್ಕಾರ ಮಾಡುವುದು ಗೊತ್ತಿರಲಿಲ್ಲ ಎಂದಲ್ಲ; ಆದರೆ ನಾವು ಅದರಲ್ಲಿ ನಮ್ಮ ಮನಸ್ಸನ್ನಿಟ್ಟರೆ ಗುಲಾಮರಾಗಿ ನಮ್ಮ ನೈತಿಕ ಎಳೆಗಳನ್ನು ಕಳೆದುಕೊಳ್ಳುತ್ತೇವೆಂಬುದು ನಮ್ಮ ಪೂರ್ವಿಕರಿಗೆ ತಿಳಿದಿತ್ತು. ಆದ್ದರಿಂದ ಅವರು

ಸಾಕಷ್ಟು ಯೋಚಿಸಿ ನಾವು ನಮ್ಮ ಕೈ ಕಾಲುಗಳಿಂದ ಮಾಡಲು ಸಾಧ್ಯವಿರುವುದನ್ನು ಮಾತ್ರ ಮಾಡಬೇಕೆಂದು ನಿರ್ಧರಿಸಿದರು.[xv]

*ಹಿಂದ್ ಸ್ವರಾಜ್* ನ ಈ ಉಲ್ಲೇಖವು ಸೂಚಿಸುವುದೆಂದರೆ, ಗಾಂಧಿಯವರು ಪರಂಪರೆಯ ಮೇಲೆ ಒತ್ತು ನೀಡುವ ಒಂದು ಆಧುನಿಕ ಪೂರ್ವ ಪಥವನ್ನು ತಮ್ಮ ನಾಡು ಅನುಸರಿಸುತ್ತದೆ ಎಂದು ಭಾವಿಸಿದ್ದರು. ಒಂದು ವಿಭಿನ್ನವಾದ ಪ್ರಗತಿಗಾಗಿ ಆಧುನೀಕರಣವನ್ನು ಜಾಣ್ಮೆಯಿಂದ ತಿರಸ್ಕರಿಸಿದ್ದ ನಮ್ಮ ಪೂರ್ವಿಕರ ಸದ್ಗುಣ ಮತ್ತು ಕಠಿಣ ಶ್ರಮಗಳಿಗೆ ಭಾರತೀಯರು ಮರಳಬೇಕೆಂದು ಅವರು ಆಶಿಸಿದ್ದರು.

## ಗಾಂಧಿಯವರ ಭಾರತದ ಪ್ರಭುತ್ವದ ರಾಜಕೀಯ ಭವಿಷ್ಯ
## The political Future of Gandhi's Indian State

ಗಾಂಧೀಜಿಯವರ ಆಧುನಿಕ ಆರ್ಥಿಕತೆಯ ಅಂದರೆ ಬಂಡವಾಳಶಾಹಿ, ಸಮಾಜವಾದ, ಮತ್ತು ಔದ್ಯೋಗೀಕರಣದ ಖಂಡನೆಯು ಅವರ ಆಧುನಿಕ ರಾಜಕೀಯ ಸಂಗತಿಗಳ ವಿಮರ್ಶೆಯ ಪ್ರತಿಫಲನವಾಗಿತ್ತು. ವರ್ತಮಾನದ ರಾಜಕೀಯ ವ್ಯವಸ್ಥೆಗಳ ಟೀಕೆಯಲ್ಲಿ ಗಾಂಧಿಯವರದು ನಿರ್ದಿಷ್ಟವಾಗಿ ಮುಚ್ಚುಮರೆಯಿಲ್ಲದ ಅಭಿವ್ಯಕ್ತಿಯಾಗಿತ್ತು. ವಿಶೇಷವಾಗಿ ಅವರು ಪಾಶ್ಚಾತ್ಯ ಪ್ರಜಾಪ್ರಭುತ್ವವನ್ನು ಮತ್ತು ಅದರ ವಿನಾಶಕಾರೀ ಕುರುಹುಗಳನ್ನು ಟೀಕೆಗೆ ಗುರಿಯಾಗಿಸಿದ್ದರು. ಉದಾಹರಣೆಗೆ *ಹಿಂದ್ ಸ್ವರಾಜ್*ನಲ್ಲಿ ಅವರು ಬ್ರಿಟಿಷ್ ಪಾರ್ಲಿಮೆಂಟ್ "ಒಂದೇ ಒಂದು ಒಳಿತನ್ನು ಮಾಡದ" ಕಾರಣ ಅದು "ಬಂಜೆ" ಎಂದು, "ಅದನ್ನು ನಿಯಂತ್ರಿಸುವ ಮಂತ್ರಿಯು ಕಾಲಕಾಲಕ್ಕೆ ಬದಲಾಗುತ್ತಾ ಹೋಗುವುದರಿಂದ" ಅದನ್ನು "ವೇಶ್ಯೆ" ಎಂದೂ ಕರೆಯುತ್ತಾರೆ.[xvi] ವೆಸ್ಟ್ ಮಿನಿಸ್ಟರ್‌ನ ಕೊರತೆಗಳ ಬಗೆಗೆ ಗಾಂಧಿ ತೀವ್ರವಾಗಿ ಪ್ರತಿಕ್ರಿಯಿಸುತ್ತಾರೆ: "ನನ್ನ ದೃಢ ನಂಬಿಕೆ ಎಂದರೆ, ಭಾರತವು ಇಂಗ್ಲೆಂಡ್‌ಅನ್ನು ಅನುಸರಿಸಿದಲ್ಲಿ ಅದು ನಾಶವಾಗುತ್ತದೆ. ಅವರ (ಬ್ರಿಟಿಷರ) ಪರಿಸ್ಥಿತಿ ಪ್ರಾಣಿಗಳದ್ದಕ್ಕಿಂತ ಕೀಳಾಗಿದೆ."[xvii] ಸಮತಾವಾದವನ್ನೂ ಗಾಂಧಿ ಇದೇ ರೀತಿಯಲ್ಲಿ ಹೀನೈಸುತ್ತಾರೆ. ಅವರಿಗೆ ಮಾರ್ಕ್ಸ್‌ವಾದದ ಕೆಲವು ವಿಚಾರಗಳು ಸೈದ್ಧಾಂತಿಕವಾಗಿ ಸ್ವೀಕಾರಯೋಗ್ಯವು; ಆದರೆ ಅವುಗಳನ್ನು ಜಾರಿ ಮಾಡುವ ಕ್ರಮ ಮತ್ತು ಅದರ ನಾಸ್ತಿಕತೆಯ ಪ್ರಚಾರವನ್ನು ಅವರು ಧಿಕ್ಕರಿಸುತ್ತಾರೆ. ಅವರ ಮಾತಿನಲ್ಲಿ, "...ಹಿಂಸೆ ಮತ್ತು ದೈವನಿರಾಕರಣೆಯನ್ನು ಆಧರಿಸಿರುವವರೆಗೆ ಅದು ನನಗೆ ಜಿಗುಪ್ಸೆ ತರುತ್ತದೆ."[xviii] ಆಚರಣೆಯಲ್ಲಿ ಅಧಿಕಾರವನ್ನು ಕೆಲವೇ ಮಂದಿಯಲ್ಲಿ (U S S Rನಲ್ಲಿದ್ದಂತೆ) ಕೇಂದ್ರೀಕರಿಸುವ ಪ್ರವೃತ್ತಿಯಿಂದಾಗಿ ಅದು ಕಳಂಕಿತವಾಗಿದೆ. ಗಾಂಧಿಯವರ ಪ್ರಭುತ್ವದ ಕಲ್ಪನೆಗೆ ಅಂತಹ ಶ್ರೇಣೀಕೃತ ಅಧಿಕಾರವ್ಯವಸ್ಥೆ ಒಂದು ಅನಿಷ್ಟ. ಅಧಿಕಾರದ ಕೇಂದ್ರೀಕರಣ ಎಷ್ಟು ಅಪಾಯಕಾರಿ ಎಂದರೆ ಅದು ಮನುಷ್ಯನ ನೈತಿಕ ಬೆಳವಣಿಗೆಯ ಮೂಲವಾದ ವೈಯಕ್ತಿಕತೆಯನ್ನು ನಾಶ ಮಾಡುತ್ತದೆ.[xix]

ಆದುದರಿಂದ ಗಾಂಧಿ ಭಾರತವನ್ನು ಪ್ರಜಾಪ್ರಭುತ್ವ ಮತ್ತು ಸಮತಾವಾದ ಎರಡರಿಂದಲೂ ದೂರವಿಡಲು ಬಯಸಿದರು. ಅವರು ರಾಜಕೀಯ ಸಂಸ್ಥೆಗಳು ಮತ್ತು ರಾಜಕೀಯ ನಾಯಕತ್ವಗಳು ಎಷ್ಟೂ ಇರದ ರಾಜಕೀಯ ಪರ್ಯಾಯ- ವನ್ನು ಸಮ್ಮತಿಸುವಂತೆ ಕಾಣುತ್ತದೆ. ದೇಶವು ಪ್ರಜ್ಞಾವಂತ ಅರಾಜಕ ಪ್ರಭುತ್ವದ (enlightened anarchy) ಕಡೆಗೆ ಚಲಿಸುತ್ತಾ ಹೋದಂತೆ ಸಂವಿಧಾನತೆ (constitutionalism) ಅನಗತ್ಯವಾಗುತ್ತದೆ ಎಂಬುದಾಗಿ ಅವರು ಸಲಹೆಯಿತ್ತರು. ಅವರು ಭರವಸೆಯಿಂದ ಹೇಳಿದ್ದೆಂದರೆ, "ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಪ್ರಭುವಾಗುವ ಪ್ರಜ್ಞಾವಂತ ಅರಾಜಕ ಪ್ರಭುತ್ವದ ಸ್ಥಿತಿಯೊಂದು ಬರಲಿದೆ. ಪ್ರತಿಯೊಬ್ಬ ವ್ಯಕ್ತಿಯೂ ಯಾವ ರೀತಿಯಲ್ಲಿ ನಡೆದುಕೊಳ್ಳುತ್ತಾನೆ ಎಂದರೆ ಅವನ ವರ್ತನೆ ನೆರೆಹೊರೆಯವರ ಒಳಿತಿಗೆ ಅಡಚಣೆಯಾಗದು."[xx] ಈ ಪ್ರಜ್ಞಾವಂತ ಅರಾಜಕ ಪ್ರಭುತ್ವದ ಸಿದ್ಧಾಂತವು ಗಾಂಧಿಯವರ ನಮ್ರ ವಿಶ್ವದೃಷ್ಟಿಗೆ ಅನೇಕ ವಿಧಗಳಲ್ಲಿ ಸಮಾನಾಂತರವಾಗಿದೆ. ರಾಜಕೀಯದಲ್ಲಿ ಜನರ ಮುಂದಾಳು ಆಗುವ ನೈತಿಕ ಗುಣಗಳು ತನಗಿದೆ

ಎಂದೂ ಅವರು ನಂಬಿರಲಿಲ್ಲ. ತಮ್ಮ ಆತ್ಮಚರಿತ್ರೆಯಲ್ಲಿ ತಾನು ವೃತ್ತಿಪರ ರಾಜಕಾರಣಿಗಳನ್ನು ಇಷ್ಟಪಡುವುದಿಲ್ಲ ಎಂದು ಅವರು ಬರೆಯುತ್ತಾರೆ; ಅವರ ರಾಜಕೀಯ ಮಹತ್ವಾಕಾಂಕ್ಷೆಗಳ ಬಗೆಗೆ ಇದ್ದ ವದಂತಿಗಳನ್ನು ಅವರು ತಳ್ಳಿ ಹಾಕುತ್ತಾರೆ. ಪ್ರಶಂಸೆ “ನನ್ನನ್ನು ಕುಕ್ಕುತ್ತದೆ” ಎಂದೂ, ಮಹಾತ್ಮಾ ಎನ್ನುವ ಬಿರುದು “ನನ್ನನ್ನು ಆಳವಾಗಿ ನೋಯಿಸಿದೆ,”[xxi] ಎಂದೂ ಅವರು ಬರೆಯುತ್ತಾರೆ. ಅಪಾರ ಪ್ರಸಿದ್ಧಿ ಮತ್ತು ವಿಶ್ವಖ್ಯಾತಿ ಇದ್ದರೂ ಅವರಿಗೆ ಅಧಿಕಾರವನ್ನು ಬೆನ್ನಟ್ಟಿ ಹೋಗುವ ಉದ್ದೇಶಗಳಿರಲಿಲ್ಲ. ಇನ್ನೂ ಹೇಳಬೇಕೆಂದರೆ ಅಧಿಕಾರವನ್ನು ಬೆನ್ನಟ್ಟಿ ಹೋಗುವ ಜನರ ಉದ್ದೇಶಗಳಬಗೆಗೆ ಅವರಿಗೆ ಆತಂಕವಿತ್ತು. ಈ ಭಯದ ನಿವಾರಣೆಗೆ ಅವರು ರಾಜಕೀಯರಹಿತ ಸ್ವಾವಲಂಬೀ ಗ್ರಾಮಗಳಿಂದ ಕೂಡಿದ ಆಧುನಿಕ ಪೂರ್ವ ಪ್ರಭುತ್ವದ ಪರಿಕಲ್ಪನೆಯನ್ನು ಮುಂದಿಟ್ಟರು. ಅಂತಹ ಪ್ರಭುತ್ವ ರಾಜಕೀಯ ಶೋಷಣೆಯ ಅವಕಾಶಗಳನ್ನು ಕಡಿಮೆ ಮಾಡುತ್ತದೆ ಮತ್ತು ಅನಿಯಂತ್ರಿತ ವೈಯಕ್ತಿಕ ಸ್ವಾತಂತ್ರ್ಯಗಳ ಅವಕಾಶವನ್ನು ಹೆಚ್ಚಿಸುತ್ತದೆ ಎಂದು ಅವರು ಭಾವಿಸಿದ್ದರು.

ಗ್ರಾಮಗಳ ಸಶಕ್ತೀಕರಣವು ಗಾಂಧಿಯವರ ಆಧುನಿಕ ಪೂರ್ವ ಪ್ರಭುತ್ವದ ತಳಹದಿ. ಸಂಯುಕ್ತ ಸರಕಾರದ ದಮನಕಾರೀ ಅಧಿಕಾರವನ್ನು ಗುಡಿಸಿ ಹಾಕಿ ಮಾಡುವ ವಿಕೇಂದ್ರೀಕರಣವು ಭಾರತದ ಹಳ್ಳಿಗಳಿಗೆ ಬಹುವಿಧದಲ್ಲಿ ಲಾಭಕಾರಿ. ಅದು ಗ್ರಾಮಗಳನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿಸಿ ಖಾದಿಯ ವಿಸ್ತರಣೆಗೆ ಅವಕಾಶ ಮಾಡಿಕೊಡುತ್ತದೆ. ಭಾರತದ ರೈತರ ಮೇಲೆ ಇಂತಹ ಕ್ರಮದ ಮಾನಸಿಕ ಪರಿಣಾಮವು ಕಡಿಮೆಯೇನಲ್ಲ. ಆಗ ಅವರಿಗೆ ತಮ್ಮನ್ನು ತಾವು ಆಳಿಕೊಳ್ಳುವ, ತಮ್ಮ ವ್ಯವಹಾರಗಳನ್ನು ತಾವೇ ನಿಭಾಯಿಸುವ ಸಾಮರ್ಥ್ಯದ ಬಗೆಗೆ ಹೆಚ್ಚಿನ ವಿಶ್ವಾಸ ಮೂಡುತ್ತದೆ. ಆಗ ಸಮಾಜವು “ನಿರಂತರ ವಿಕಾಸ ಹೊಂದುವ ಎಂದಿಗೂ ಮೇಲೆ ಹತ್ತಿ ಹೋಗದ ಅಸಂಖ್ಯ” ಗ್ರಾಮ ಗಣರಾಜ್ಯಗಳಿಂದ ರಚಿತವಾಗಿರುತ್ತದೆ.[xxii] ೧೯೪೪ರಲ್ಲಿ ಪ್ರಕಟಿಸಿದ ಒಂದು ಲೇಖನದಲ್ಲಿ ಗಾಂಧಿಯವರು ಈ ಗ್ರಾಮಕೇಂದ್ರಿತ ಸಿದ್ಧಾಂತವನ್ನು ವಿವರಿಸುತ್ತಾರೆ:

> ಸ್ವಾತಂತ್ರ್ಯವು ಬುಡದಿಂದ ಪ್ರಾರಂಭವಾಗಬೇಕು. ಹೀಗೆ ಪ್ರತಿಯೊಂದು ಹಳ್ಳಿಯೂ ಸಂಪೂರ್ಣ ಅಧಿಕಾರ ಹೊಂದಿರುವ ಒಂದು ಗಣರಾಜ್ಯವಾಗಿರುತ್ತದೆ. ಆದ್ದರಿಂದ, ಪರಿಣಾಮವಾಗಿ ಮುಂದುವರಿಯುವುದೆಂದರೆ ಪ್ರತಿಯೊಂದು ಹಳ್ಳಿಯೂ ಸ್ವಯಮಾಧಾರಿತ(self-sustained)ವಾಗಿದ್ದು ತನ್ನ ವ್ಯವಹಾರಗಳನ್ನು ತಾನೇ ನೋಡಿಕೊಳ್ಳುವಂತಿರಬೇಕು. ಎಷ್ಟರ ಮಟ್ಟಿಗೆ ಎಂದರೆ, ಇಡೀ ಪ್ರಪಂಚದ ಎದುರು ತನ್ನನ್ನು ತಾನು ರಕ್ಷಿಸಿಕೊಳ್ಳುವಷ್ಟು. ಹೊರಗಿನ ದಾಳಿಯಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು, ಮತ್ತು ಹಾಗೆ ಮಾಡುವಾಗ ನಾಶ ಹೊಂದಲು ಸಹ ಅದು ತರಬೇತಿಯನ್ನು ಪಡೆದಿರುತ್ತದೆ.[xxiii]

ಬಹಶಃ ಗಾಂಧಿ ಭಾರತ ಸಮಾಜದ ಕಾರ್ಯವಿಧಾನವನ್ನು ಬದಲಿಸಲು ಬಯಸಿದ್ದರು. ಇದು ಔದ್ಯೋಗೀಕರಣ, ಬಂಡವಾಳಶಾಹಿ, ಪ್ರಜಾಪ್ರಭುತ್ವ ಮತ್ತು ಸರಕಾರೀ ನಿಯಂತ್ರಣಗಳನ್ನು ತೊಡೆದು ಹಾಕಿ ಪ್ರಾಂತೀಯ ಗಡಿಗಳು ಮತ್ತು ರಾಷ್ಟ್ರೀಯ ಸೈನ್ಯವನ್ನು ಅನಗತ್ಯಗೊಳಿಸುವಂತಹುದು. ಅವರು ಎಲ್ಲಿಯವರೆಗೆ ಹೋಗುತ್ತಾರೆ ಎಂದರೆ ಅವರ ಪ್ರಕಾರ ಅನುಮತಿಯಿರುವ ಹಣದ ಏಕೈಕ ರೂಪವೆಂದರೆ ಖಾದಿ ನೂಲನ್ನು ಕೊಳ್ಳುವುದು ಮತ್ತು ಮಾರುವುದು.[xxiv] ಅವರು ಆಧುನಿಕ ಪ್ರಭುತ್ವದ ಸಂಸ್ಥೆಗಳನ್ನು ತೊಡೆದು ಹಾಕಲು— ಉದಾಹರಣೆಗೆ ಹಣ ಮತ್ತು ರಾಷ್ಟ್ರೀಯ ಸೈನ್ಯವನ್ನು ಇಲ್ಲವಾಗಿಸುವುದು—ಮತ್ತು ಆ ಮೂಲಕ ಸಮಾಜವನ್ನು ಪರಿವರ್ತಿಸಲು ಕನಸು ಕಂಡಿದ್ದರಿಂದ ಅವರನ್ನು ಸಕಾರಣವಾಗಿ ಅರಾಜಕತಾವಾದಿ (anarchist) ಎನ್ನಬಹುದು.[xxv]

ಅವರು ಸಾಧ್ಯವಾದಷ್ಟೂ ಕಡಿಮೆ ಆಡಳಿತವಿರುವ ಭಾರತೀಯ ಪ್ರಭುತ್ವಕ್ಕಾಗಿ ಹೋರಾಡಿದರೂ ಸಹ, ಈ ಬದಲಾವಣೆಗಳನ್ನು ಜಾರಿಗೆ ತರುವುದು ಹೇಗೆ ಎಂದಾಗಲೀ ಮತ್ತು ಯಾವ ಮಟ್ಟಿಗೆ ಈ

ಬದಲಾವಣೆಗಳು ಹೊಸ ಸಮಾಜವನ್ನು ಸೃಷ್ಟಿಸುತ್ತವೆ ಎಂದಾಗಲೀ ನಿರ್ದಿಷ್ಟವಾಗಿ ಹೇಳಲಿಲ್ಲ. ಒಂದು ವೇಳೆ ಅವರಿಗೆ ಅವಕಾಶ ಸಿಕ್ಕಿದ್ದರೆ ಅವರು ಯಾವ ರೀತಿಯಲ್ಲಿ ತಮ್ಮ ವಿಚಾರಗಳನ್ನು ಮೂರ್ತರೂಪಕ್ಕೆ (ವಾಸ್ತವದಲ್ಲಿ) ತರಲು ಪ್ರಯತ್ನಿಸುತ್ತಿದ್ದರು ಎಂಬುದರ ಬಗೆಗೆ ಹೇಳಲು ಆಧುನಿಕ ವಿದ್ವಾಂಸರಿಗೆ ಸಾಧ್ಯವಾಗುವುದಿಲ್ಲ (ಗಾಂಧಿಯವರಿಗೆ ಅಂತಹ ಅವಕಾಶ ಸಿಕ್ಕಲಿಲ್ಲ, ಏಕೆಂದರೆ ಅವರು ೧೯೪೮ರಲ್ಲಿ ಹತ್ಯೆಗೊಳಗಾದರು). ಸಾಮೂಹಿಕ ಇಚ್ಛಾಶಕ್ತಿಯ ಅಭಿವ್ಯಕ್ತಿಗೆ ಗಾಂಧಿಯವರಿಗೆ ಒಂದು ನೈತಿಕ ಚೌಕಟ್ಟು ಬೇಕಿತ್ತು ಎಂಬುದರ ಬಗೆಗೆ ಇತಿಹಾಸಕಾರರಲ್ಲಿ ಒಮ್ಮತವಿದೆ. ಆದರೆ ಪ್ರಾಯೋಗಿಕವಾದ ಅನುಷ್ಠಾನದಲ್ಲಿ ಆ ವಿನ್ಯಾಸವು ಹೇಗೆ ಕಾಣಬಹುದಿತ್ತು ಎಂಬುದರ ಬಗೆಗೆ ಅವರಲ್ಲಿ ಒಮ್ಮತವಿಲ್ಲ. ಗಾಂಧಿಯು ಸಕಾರಾತ್ಮಕವಾದ ಕಾನೂನು ರಹಿತವಾದ ಪ್ರಭುತ್ವವನ್ನು ಅಪೇಕ್ಷಿಸಿದ್ದರು ಎಂದು ಒತ್ತಿ ಹೇಳುತ್ತಾರೆ: "ಸರಳ, ಸಹಕಾರಯುಕ್ತ ಜೀವನವನ್ನು ನಡೆಸುವ ಸತ್ಯವಂತ ವ್ಯಕ್ತಿಗಳಿಗೆ ಹೊರಗಿನ ನಿಯಂತ್ರಣ ಎಷ್ಟೂ ಬೇಕಿಲ್ಲ ಮತ್ತು ಅವರು ತಮ್ಮ ವ್ಯವಹಾರಗಳನ್ನು ಸಾಮರಸ್ಯದಿಂದ ನಿಭಾಯಿಸುವಷ್ಟು ಸಮರ್ಥರಾಗಿರುತ್ತಾರೆ, "[xxvi]ಎಂದು ಅವರು ವಿವರಿಸುತ್ತಾರೆ. ಅದೇ ವೇಳೆ ರುದ್ರಾಂಶು ಮುಖರ್ಜಿಯವರು ಗಾಂಧಿ ಎಂತಹ ಪ್ರಭುತ್ವವನ್ನು ಅಪೇಕ್ಷಿಸಿದ್ದರೆಂದರೆ, "ಆಳುವವರಿಗೂ ಆಳಲ್ಪಡುವವರಿಗೂ ನಡುವೆ ಅಂತರವಿಲ್ಲದ, ಆಳುವವರು ಯಾವಾಗಲೂ ಸಾಮೂಹಿಕ ಇಚ್ಛಾಶಕ್ತಿಯನ್ನು ಅಭಿವ್ಯಕ್ತಿಸುವಂತಹ"[xxvii] ಪ್ರಭುತ್ವವನ್ನು ಎಂದು ಹೇಳುತ್ತಾರೆ. ಪಾರ್ಥಾ ಚಟರ್ಜಿಯವರು ನಂಬುವುದೆಂದರೆ ಗಾಂಧಿಯವರು ಪ್ರಭುತ್ವವನ್ನು ಒಂದು ನಾಮಮಾತ್ರದ ಮುಖ್ಯಸ್ಥರಿಂದ ಅಭಿಷಿಕ್ತಗೊಳಿಸುತಿದ್ದರು ಎಂದು. ಆ ಸಾಂಕೇತಿಕ ಪ್ರಭು "ತಮ್ಮ ನೈತಿಕ ಗುಣಗಳಿಂದ ಮತ್ತು ಅಭ್ಯಾಸರೂಢ ಸತ್ಯಸಂಧತೆಯಿಂದ ಯಾವಾಗಲೂ ಸಾಮೂಹಿಕ ಇಚ್ಛಾಶಕ್ತಿಯನ್ನು ಅಭಿವ್ಯಕ್ತಿಸುವವರಾಗಿರುತ್ತಾರೆ,"[xxviii] ಎಂದು ಅವರು ಬರೆಯುತ್ತಾರೆ. ಒಂದು ವೇಳೆ ಅವಕಾಶ ಸಿಕ್ಕಿದ್ದರೆ ಎಷ್ಟು ಮಹತ್ವಾಕಾಂಕ್ಷೆಯಿಂದ ಗಾಂಧಿ ತಮ್ಮ ಆದರ್ಶಪೂರ್ಣ ಪ್ರಸ್ತಾವನೆಗಳ ಅನುಷ್ಠಾನಕ್ಕೆ ಪ್ರಯತ್ನಿಸುತ್ತಿದ್ದರು ಎಂಬುದು ಗೊತ್ತಿಲ್ಲ.

ಕಾಲಾಂತರದಲ್ಲಿ ಗಾಂಧಿಯವರು ಈ ವಿಚಾರದ ಬಗೆಗೆ ತಮ್ಮ ನಿಲುವನ್ನು ಸೂಕ್ಷ್ಮವಾಗಿ ಮಾರ್ಪಡಿಸಿದುದರಿಂದ ಸಂದಿಗ್ಧಾರ್ಥತೆಗೆ ಅವಕಾಶವಾಗಿದೆ. ಅವರ ಜೀವನದ ಹೆಚ್ಚು ಕಾಲ ಅವರು ಪಾರ್ಲಿಮೆಂಟರಿ ರಾಜಕೀಯದ ವಿರೋಧಿ-ಯಾಗಿದ್ದರು. ೧೯೪೫ರ ಚಳಿಗಾಲದಲ್ಲಿ, ಅವರ ಸಾವಿಗೆ ಕೇವಲ ಎರಡು ವರ್ಷ ಮೊದಲು ಅವರ ಸಹೋದ್ಯೋಗಿಗಳಿಗೆ ಕಾಂಗ್ರೆಸ್‌ನಿಂದ (INC) ಮಂತ್ರಿಗಳಾಗ-ದಂತೆ ಮನವಿ ಮಾಡಿದ್ದರು. ಏಕೆಂದರೆ ಪ್ರಜಾಸತ್ತಾತ್ಮಕ ರಾಜಕೀಯ ಚಟುವಟಿಕೆಯಲ್ಲಿ ಲೋಪಗಳಿವೆ[xxix] ಎಂದು. ಭಾರತೀಯರ ಕೈಗೆ ಅಧಿಕಾರದ ಹಸ್ತಾಂತರವಾಗುವುದು ಒಂದು ವಾಸ್ತವವಾಗಿ ಕಂಡಾಗ ಅವರು ಇಕ್ಕಟ್ಟಿನಲ್ಲಿ ಸಿಲುಕಿದರು. ದಶಕಗಳ ಕಾಲ ಅವರು ಭಾರತೀಯ ಪ್ರಭುತ್ವದ ಭವಿಷ್ಯದ ಬಗೆಗೆ ಬರೆದಿದ್ದರು. ಆದರೆ ಸ್ವಾತಂತ್ರ್ಯವು ಸನ್ನಿಹಿತವಾದಾಗ ಅವರ ವಿಚಾರಗಳು ಫಲಪ್ರದವಾಗುವಂತೆ ಕಾಣಲಿಲ್ಲ. ಅವರು ಹೇಗೆ ಪ್ರತಿಕ್ರಿಯಿಸಬೇಕು? ಇದು ಗಾಂಧೀಜಿಯವರಿಗೆ ಸಂಕಟದ ಇಬ್ಬಂದಿಯಾಯಿತು. ಏಕೆಂದರೆ ಈ ಪರಿಸ್ಥಿತಿಯು ಅವರ ರಾಜಕೀಯ ದರ್ಶನ ಮತ್ತು ಸರಕಾರವೊಂದನ್ನು ನಡೆಸುವ ವಾಸ್ತವಗಳ ನಡುವೆ ಇದ್ದ ಮೂಲಭೂತ ಅಸಾಮರಸ್ಯವನ್ನು ಪ್ರತಿನಿಧಿಸುತ್ತಿತ್ತು.[xxx]

ಈ ಅಸಾಂಗತ್ಯ(discrepancy)ವನ್ನು ಪರಿಹರಿಸಲು ಅವರು ಮಾಡಿದ ಪ್ರಯತ್ನವೆಂದರೆ ಸರಕಾರೀ ಸಂಸ್ಥೆಗಳಿಗೆ ಅತ್ಯಂತ ನಿಯಮಿತ ಪ್ರಮಾಣದ ಮೇಲ್ವಿಚಾರಣಾ ಪಾತ್ರವೊಂದನ್ನು ಒಪ್ಪಿಕೊಳ್ಳುವುದು. ೧೯೪೭ರ ಮಧ್ಯಭಾಗದಲ್ಲಿ ಸರಕಾರವು ಸಮಾಜದಲ್ಲಿ ಪಾತ್ರ ವಹಿಸಬಹುದಾದ ಒಂದು ಕಿರಿದಾದ ಯೋಜನೆಯನ್ನು ಸಲಹೆ ಮಾಡಿದರು. ಅದು ಕೇವಲ ಮೂರೇ ಮೂರು ಕ್ಷೇತ್ರಗಳಲ್ಲಿ ಮಾತ್ರ ಸಹಾಯಕವಾಗಬಹುದಿತ್ತು: ಅವೆಂದರೆ ಹತ್ತಿಯ ಉತ್ಪಾದನೆ, ಗೋಸಂಪತ್ತಿನ (ದನಕರು ಸಂಪತ್ತಿನ - cattle wealth) ಪಾಲನೆ, ಕೈಗಳಿಂದ ನೂಲುತೆಗೆಯುವ ವ್ಯವಸ್ಥೆ. ಹೆಚ್ಚೆಂದರೆ ಒಬ್ಬ ಸರಕಾರೀ ಮಂತ್ರಿಯು ಹೊಸ ಖಾದೀ ಯೋಜನೆಗಳನ್ನು ಪುನರ್ಬಲಗೊಳಿಸಲು ಹೋಗಬಹುದಿತ್ತಷ್ಟೆ.[xxxi]

ಕಾರ್ಯಯೋಜನೆಯ ಒಂದು ನಿರ್ದಿಷ್ಟ ರೂಪರೇಖೆಗೆ ಒತ್ತಾಯಿಸಿದಾಗ, ಗಾಂಧಿ ಹಾರಿಕೆಯ ಉತ್ತರ ನೀಡಿದರು: "ನನಗೆ ಯಾವ ಪ್ರಶ್ನೆ ಪ್ರಸ್ತುತ ಎಂದರೆ ಮಂತ್ರಿಯಾಗಿ ಒಬ್ಬರಿಗೆ (A.I.S.A) ಖಾದಿ ಯೋಜನೆಗಳು ಯಶಸ್ಸು ಕಾಣುವಂತೆ ಮಾರ್ಗದರ್ಶನ ಮಾಡುವ ಗಾಢನಂಬಿಕೆ ಇದೆಯೇ ಎಂಬುದು."[xxxii] ಸ್ವಾತಂತ್ರ್ಯವು ಹತ್ತಿರ ಬಂದಂತೆ ಗಾಂಧಿ ಕೆಲವು ಮಂತ್ರಿ ಸ್ಥಾನದ ಜವಾಬ್ದಾರಿಗಳಿಗೆ ಅವಕಾಶ ನೀಡುವ ಒಂದು ಯೋಜನೆ ತಯಾರಿಸಿದರು. ಆದರೆ ವಾಸ್ತವವಾಗಿ ಅವರು ಪ್ರತಿಬಿಂಬಿಸುತ್ತಿದ್ದುದು ಆಧುನಿಕ ಸರಕಾರದ ಇಲ್ಲದಿರುವಿಕೆಯನ್ನು ಅಥವಾ ಮನ್ನಿಸದಿರುವಿಕೆಯನ್ನು.

## ಗಾಂಧಿಯವರ ಆದರ್ಶೀಕೃತ ಪ್ರಭುತ್ವದ ಸಾಮಾಜಿಕ ಮತ್ತು ಧಾರ್ಮಿಕ ದೃಶ್ಯಾವಳಿ
## The Social and Religious Landscape of Gandhi's Idealized State

ದೈಹಿಕ ಶ್ರಮ, ಸ್ವಯಂ ಆಧಾರಿತ ಗ್ರಾಮಗಳು ಮತ್ತು ಧಾರ್ಮಿಕ ಸಹಕಾರ ಇವುಗಳನ್ನು ಉತ್ತೇಜಿಸುವುದರೊಂದಿಗೆ, ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಬೆಳವಣಿಗೆಯ ಬಗೆಗೆ ಗಾಂಧಿ ತೀವ್ರವಾಗಿ ಚಿಂತಿಸಿದ್ದರು. ಕೆಲವೊಮ್ಮೆ ಪ್ರಭುತ್ವದ ಬಗೆಗಿನ ರಾಜಕೀಯ ಭವಿಷ್ಯವಾಣಿಯಲ್ಲಿ ಅವರು ಇಬ್ಬಂದಿತನವನ್ನು ತೋರಿಸಿದ್ದರೂ ಸಹ, ಅವರ ಧಾರ್ಮಿಕ ದೃಷ್ಟಿಕೋನವು ದೃಢವಾಗಿದ್ದಿತು. ಅವರ ಧಾರ್ಮಿಕ ಚಿಂತನೆಗಳು ಮೂರು ಪ್ರಮುಖ ಗುರಿಗಳನ್ನು ಹೊಂದಿದ್ದವು. ಅವುಗಳೆಂದರೆ ಅಸ್ಪೃಶ್ಯತೆಯ ನಿವಾರಣೆ, ಜಾತಿ ಪದ್ಧತಿಯ ವರ್ಣಭೇದದ ಕಾಯ್ದುಕೊಳ್ಳುವಿಕೆ, ಮತ್ತು ಭಾರತವನ್ನು ಸಹನೆ, ವಿನಯ, ಮತ್ತು ಧಾರ್ಮಿಕತೆಯಲ್ಲಿ ನೆಲೆಗೊಳಿಸುವುದು. ಅವರ ದೃಷ್ಟಿಯಲ್ಲಿ ಭವಿಷ್ಯಭಾರತವು ಈ ಮೂಲಾಧಾರ ತತ್ವಗಳನ್ನು ಆಧರಿಸಿರಬೇಕು ಎಂದು ಯಾರೇ ಆದರೂ ಭಾವಿಸಬಹುದು.

ಭಾರತವನ್ನು ಧಾರ್ಮಿಕವಾಗಿ ಪುನಃಶ್ಚೇತನಗೊಳಿಸುವ ಒಂದು ಮಾರ್ಗ ಎಂದರೆ ಅಸ್ಪೃಶ್ಯತೆಯನ್ನು ಅಳಿಸಿಹಾಕುವುದು. ಪಾರಂಪರಿಕ ಹಿಂದೂ ನಂಬಿಕೆಯ ಪ್ರಕಾರ, ಅಸ್ಪೃಶ್ಯನೆಂದರೆ ಹಿಂದೂ ಧರ್ಮಶಾಸ್ತ್ರಗಳ ಯಾವುದೇ ನಾಲ್ಕು ವರ್ಣಗಳಿಗೆ ಸೇರದ ವ್ಯಕ್ತಿ. ಶತಮಾನಗಳಿಂದಲೂ ಈ ಪರಿಕಲ್ಪನೆಯು ದಿನನಿತ್ಯದ ಬದುಕಿನಲ್ಲಿ ಗಟ್ಟಿಯಾಗಿ ನೆಲೆಗೊಂಡು ಪರಿಪಾಠವಾಯಿತು. ಹಿಂದೂ ಮತ್ತು ಮುಸ್ಲಿಮ್ ಅಸ್ಪೃಶ್ಯರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೊಂದಿಗಿನ (ಕ್ರಮವಾಗಿ ಇವರು ವಿದ್ವಾಂಸ ವರ್ಗ, ಉನ್ನತ ಮತ್ತು ಸಾಮಾನ್ಯ ಕುಲೀನ ವರ್ಗ, ವ್ಯಾಪಾರೀ ಹಾಗೂ ಕುಶಲಕರ್ಮಿಗಳ ವರ್ಗ ಹಾಗೂ ಸೇವೆ ನೀಡುವವರ ವರ್ಗ) ದಿನನಿತ್ಯದ ಪಾರಸ್ಪರಿಕ ವ್ಯವಹಾರಗಳಿಂದ ಹೊರಗಿಡಲ್ಪಟ್ಟಿದ್ದರು. ಕೋಟ್ಯಾಂತರ ರೈತರು ತಮ್ಮ ಕನಸು ಮತ್ತು ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳದಂತೆ ತಡೆಯುವ ಒಂದು ವಿನಾಶಕಾರೀ ಅಡಚಣೆ ಅಸ್ಪೃಶ್ಯತೆ ಎಂದು ಗಾಂಧಿ ನಂಬಿದ್ದರು. ಅದು ಸ್ವರಾಜ್ಯವನ್ನು ಮತ್ತು ಅವರು ಅತ್ಯುತ್ಸಾಹದಿಂದ ಬಯಸಿದ್ದ ನೈತಿಕವಾಗಿ ಪ್ರಜ್ಞಾವಂತವಾದ ಪ್ರಭುತ್ವವನ್ನು ತಡೆಹಿಡಿದಿತ್ತು. ಈ ಧಾಟಿಯಲ್ಲಿ ೧೯೨೦ರಲ್ಲಿ ನಾಗಪುರದ ಕಾಂಗ್ರೆಸ್ ಸಮ್ಮೇಳನದಲ್ಲಿ ಅಸ್ಪೃಶ್ಯತೆಯನ್ನು ಖಂಡಿಸುವ ಗಾಂಧಿಯವರಿಂದ ಪ್ರೇರಣೆಗೊಂಡ ನಿರ್ಣಯವನ್ನು ಜಾರಿ ಮಾಡಲಾಯಿತು. ಆ ನಿರ್ಣಯವು ಅಸ್ಪೃಶ್ಯತೆಯ ಪರಂಪರೆಯನ್ನು ಒಂದು ಮಹಾಪಾಪ ಎಂದು ಘೋಷಿಸಿ, ಹಿಂದೂ ಧರ್ಮವನ್ನು ಸರಿಯಾದ ರೀತಿಯಲ್ಲಿ ಸುಧಾರಿಸುವಂತೆ ಧಾರ್ಮಿಕ ಮುಂದಾಳುಗಳಿಗೆ ಕೋರಿತು. ೧೯೩೦ರ ದಶಕದ ಮೊದಲ ವರ್ಷಗಳಲ್ಲಿ ದಮನಿತ ವರ್ಗಗಳ ಪರವಾಗಿ ಗಾಂಧಿ ತಮ್ಮ ಕೆಲಸವನ್ನು ಮುಂದುವರಿಸಿದರು. ಈ ಕಾರ್ಯ ೧೯೩೨ರ ಸೆಪ್ಟೆಂಬರ್ – ಅಕ್ಟೋಬರ್ ತಿಂಗಳುಗಳಲ್ಲಿ ನಡೆದ ಅಸ್ಪೃಶ್ಯತಾ ನಿವಾರಣಾ ಸಪ್ತಾಹದಲ್ಲಿ ಅತ್ಯುಚ್ಚ ಸ್ಥಿತಿಯನ್ನು ತಲುಪಿತು.[xxxiii] ಕಾಹಿಲೆಯನ್ನು ರೋಗಸೂಚನೆಗಳಿಂದ ಪತ್ತೆಹಚ್ಚುವುದು ಸಾಧ್ಯವಾದರೆ—ಈ ಪ್ರಸಂಗದಲ್ಲಿ ಸಾಧ್ಯ—ಗಾಂಧಿ ಅಸ್ಪೃಶ್ಯತಾ ಮುಕ್ತ ಭಾರತ ರಾಷ್ಟ್ರಕ್ಕೆ ಕರೆ ಕೊಟ್ಟರು.

ಗಾಂಧಿ ದಮನಿತ ವರ್ಗಗಳನ್ನು ಮೇಲೆತ್ತಲು ಹಾಗೂ ಬೆಂಬಲಿಸಲು ಹೋರಾಟ ಮಾಡಿದರೂ ಸಹ, ಅವರು ಸಮಗ್ರ ಜಾತಿ ವ್ಯವಸ್ಥೆಯ ರದ್ದತಿಯ ಪರವಾಗಿರಲಿಲ್ಲ. ಪರಂಪರೆಯ ಕೆಲವು ಅಂಶಗಳನ್ನು, ನಿರ್ದಿಷ್ಟವಾಗಿ ವರ್ಣಭೇದವನ್ನು, ಅವರು ಸಮರ್ಥಿಸಿದರು. ೧೯೨೦ರ ಒಂದು ಲೇಖನದಲ್ಲಿ ಏಕೆ ವರ್ಣಭೇದವನ್ನು ಭವಿಷ್ಯದ ಸಮಾಜದಲ್ಲಿ ಉಳಿಸಿಕೊಳ್ಳಬೇಕು ಎಂದು ವಿವರಿಸುತ್ತಾರೆ: "ನಾನು ನಾಲ್ಕು ವರ್ಣಗಳನ್ನು ಮೂಲಭೂತ, ಸಹಜ ಮತ್ತು ಅತ್ಯಗತ್ಯ ಎಂದು ಪರಿಗಣಿಸುತ್ತೇನೆ. ಅಸಂಖ್ಯ ಉಪಜಾತಿಗಳು ಕೆಲವೊಮ್ಮೆ ಅನುಕೂಲಕರ, ಆದರೆ ಹೆಚ್ಚಿನ ವೇಳೆ ಒಂದು ಅಡಚಣೆಯಾಗಿವೆ. ಇವು ಬೇಗ ಏಕತ್ರಗೊಂಡಷ್ಟೂ ಉತ್ತಮ. ಆದರೆ ನಾನು ಮೂಲಭೂತ ವಿಂಗಡಣೆಗಳನ್ನು ನಾಶ ಮಾಡುವ ಪ್ರಯತ್ನಗಳಿಗೆ ಸಂಪೂರ್ಣವಾಗಿ ವಿರೋಧವಾಗಿದ್ದೇನೆ."[xxxiv] ಜಾತಿಯ ತತ್ವಗಳು ಅನಂತವಾಗಿದ್ದು ಸಾಮಾಜಿಕ ಸಾಮರಸ್ಯವನ್ನು ನೀಡುತ್ತವೆ. "ನಾನು ಒಬ್ಬ ಬ್ರಾಹ್ಮಣನನ್ನು ಎಂದೆಂದಿಗೂ ಬ್ರಾಹಣನನ್ನಾಗಿಯೇ ಪರಿಗಣಿಸುವುದರಲ್ಲಿ ಮಹತ್ತರ ಉಪಯುಕ್ತತೆಯನ್ನು ಕಾಣುತ್ತೇನೆ."[xxxv] ಗಾಂಧಿಯವರ ಭವಿಷ್ಯ ಭಾರತದಲ್ಲಿ ಪ್ರತಿಯೊಂದು ಗ್ರಾಮವೂ ಈ ನಾಲ್ಕು ವಿಧದ ವಿಂಗಡಣೆಗಳ ಸುತ್ತ ವ್ಯವಸ್ಥಿತವಾಗಿರುತ್ತದೆ. ಸಮಾಜದ ಪ್ರತಿಯೊಬ್ಬ ಸದಸ್ಯರೂ ತಮ್ಮ ತಮ್ಮ ಕರ್ತವ್ಯವನ್ನು ಒಂದು ಸಹಕಾರೀ ಚೌಕಟ್ಟಿನಲ್ಲಿ ನಿರ್ವಹಿಸುತ್ತಾರೆ. ಒಂದು ಸಂಪೂರ್ಣ ಪರಸ್ಪರತೆಯ ವ್ಯವಸ್ಥೆಯು ಯಾರೂ ಕೂಡ ಅಂತಸ್ತಿನ ಅಂತರವಿದೆ ಎಂದು ಭಾವಿಸಲು ಅವಕಾಶ ಕೊಡುವುದಿಲ್ಲ[xxxvi] ಎಂದು ಗಾಂಧಿ ನಂಬಿದ್ದರು.

ಬಹುಶಃ ಪ್ರಜ್ಞಾವಂತ ಅರಾಜಕತೆಯ ಬಹು ಮುಖ್ಯ ಅಂಶವೆಂದರೆ ಉತ್ತಮ ಗಮನ ಮತ್ತು ಸಹನೆ. ಗಾಂಧಿಯವರು ಸ್ಪಷ್ಟಪಡಿಸಿದ್ದೇನೆಂದರೆ ಭಾರತೀಯರು ಪ್ರಾಥಮಿಕವಾಗಿ ತಮ್ಮನ್ನು ತಾವು ಭಾರತೀಯರೆಂದು ಭಾವಿಸಬೇಕು. ಆದಾಗ್ಯೂ, ಅವರು ಭಾರತೀಯ ಹಿಂದು ಅಥವಾ ಭಾರತೀಯ ಮುಸ್ಲಿಂ ಎಂದು ಸಹ ಭಾವಿಸತಕ್ಕದ್ದು. ಅವರದೇ ಮಾತನ್ನು ಬಳಸುವುದಾದರೆ ಭಾರತವನ್ನು "ಧಾರ್ಮಿಕ ಮಣ್ಣಿನಲ್ಲಿ" ಬೇರೂರಿಸಬೇಕು."[xxxvii] ಭಾರತೀಯರಿಗೆ "ಕಳೆದ ಐವತ್ತು ವರುಷಗಳಲ್ಲಿ ಕಲಿತದ್ದನ್ನು ಮರೆಯಬಲ್ಲ" ಸಾಮರ್ಥ್ಯವಿದೆಯಲ್ಲದೆ, ಎಲ್ಲಾ ಪಂಗಡಗಳೂ ಶಾಂತಿಯಿಂದ ಬದುಕುತ್ತಿದ್ದ ಆಧುನಿಕ ಪೂರ್ವ ಪ್ರಭುತ್ವಕ್ಕೆ ಮರಳಬಲ್ಲರು[xxxviii] ಎಂದೂ ಅವರು ನಂಬಿದ್ದರು. ಈ ತತ್ವಗಳನ್ನು ಕಾರ್ಯಗತಗೊಳಿಸಲು ಗಾಂಧಿ ಹಲವು ಸಮುದಾಯಗಳನ್ನು ಸ್ಥಾಪಿಸಿದರು. ಅಹಮದಾಬಾದ್ ಮತ್ತು ವಾರ್ಧಾ ಆಶ್ರಮಗಳಲ್ಲಿ ಅವರು ಅನುಯಾಯಿ-ಗಳನ್ನು ಸಿದ್ಧಗೊಳಿಸಿದರು. ಈ ಅನುಯಾಯಿಗಳಿಗೆ ಒಂದು ಅಂತರ ಧರ್ಮೀಯ ವಾತಾವರಣದಲ್ಲಿ ಅತ್ಯಂತ ಶಿಸ್ತಿನ ಪರಿಶ್ರಮ ಮತ್ತು ಪ್ರಾರ್ಥನೆಯ ಬದುಕನ್ನು ಅನುಸರಿಸಲು ತರಬೇತಿ ನೀಡಿದರು.[xxxix] ಗಾಂಧಿಯವರ ಲೈಂಗಿಕ ಸನ್ನಡತೆಯ ಉದಾಹರಣೆಯನ್ನು ಅನುಸರಿಸಿ ಅವರ ಅನುಯಾಯಿಗಳು ವಿವಾಹ-ವಾಗಿದ್ದರೂ ಲೈಂಗಿಕ ಸಂಪರ್ಕದಿಂದ ದೂರ ಉಳಿಯುತ್ತಿದ್ದರು. ಎಲ್ಲಾ ಧರ್ಮಗಳಿಗೆ ಸೇರಿದ ಭಾರತೀಯರ ನಡುವೆ ಐಕ್ಯತೆಯನ್ನು ಬೆಳೆಸುವುದರ ಮೂಲಕ, ದೈಹಿಕ ಶ್ರಮ ಮತ್ತು ಸ್ವಯಂ ಮಿತಿಗಳ ಸರಳತೆಯನ್ನು ಬಿತ್ತುವುದರ ಮೂಲಕ ಗಾಂಧಿ ಒಂದು ಹೊಸ ಸಮಾಜದ ಬೀಜಾಂಕುರದ ಭರವಸೆ ಹೊಂದಿದರು. ಈ ಭವಿಷ್ಯಭಾರತದ ಪ್ರಭುತ್ವದಲ್ಲಿ ಅವರು ಧಾರ್ಮಿಕ ಆಚರಣೆಯನ್ನು ಮುನ್ನೆಲೆಯಲ್ಲಿ ಇರಿಸಿದರು. "ನನ್ನ ಮೊದಲ ದೂರು ಎಂದರೆ ಭಾರತವು ಅಧಾರ್ಮಿಕವಾಗುತ್ತಿದೆ. ನಾವು "ದೇವರಿಗೆ ವಿಮುಖವಾಗುವುದನ್ನು" ತಡೆಯಬೇಕು[xl] ಎಂದು ಅವರು ಬರೆದರು.

**ಪರಿಸಮಾಪ್ತಿ**

ಗಾಂಧಿಯವರು ಭೂತಕಾಲಕ್ಕೆ ತ್ವರಿತ ಹಿಂದಿರುಗುವಿಕೆಯನ್ನು ಆಧರಿಸಿದ ಭವಿಷ್ಯಕ್ಕೆ ಹಾತೊರೆದರು. ಗಾಂಧಿಯವರ ಬಗೆಗಿನ ಮಾನಕ ಸಾಹಿತ್ಯವು ಅವರ ಅಸಾಂಪ್ರದಾಯಿಕ ವಿಚಾರಗಳನ್ನು ಉಪೇಕ್ಷಿಸುತ್ತದೆ. ಆದರೂ ಅವರು ತಮ್ಮ ತಾಯ್ನಾಡಿನ ಭವಿಷ್ಯದ ಬಗೆಗೆ ದೃಢವಾದ ವಿಚಾರಗಳನ್ನು ಹೊಂದಿದ್ದರು ಎನ್ನುವ ವಾದವನ್ನು ಸಮರ್ಥಿಸಲು ಸಾಕಷ್ಟು ಪುರಾವೆ ಇದೆ. ಈ ವಿಚಾರಧಾರೆಯ ಕೇಂದ್ರದಲ್ಲಿದ್ದುದು ಎಂದರೆ ಆಧುನಿಕ ನಾಗರೀಕತೆಯ ಮತ್ತು ಅದರ ಭಾಗವಾದ ಬಂಡವಾಳಶಾಹಿ,

ಸಮಾಜವಾದ, ಪ್ರಜಾಪ್ರಭುತ್ವ ಮತ್ತು ಸಮತಾವಾದದ ಖಂಡನೆ. ಬಂಡವಾಳಶಾಹಿಯ ಸ್ವಯಂ ಲೋಲುಪತೆಯ ಅಂಶಗಳನ್ನು ಮತ್ತು ಸಮಾಜವಾದದ ಔದ್ಯೋಗೀಕರಣದ ಪ್ರವೃತ್ತಿಗಳನ್ನು ಅವರು ಜಿಗುಪ್ಸೆಯಿಂದ ನೋಡಿದರು. ಅದೇ ರೀತಿಯಲ್ಲಿ ಅವರು ಬ್ರಿಟಿಷ್ ಪಾರ್ಲಿಮೆಂಟ್ ಅನ್ನು ಗೇಲಿ ಮಾಡಿ, ಅದರ ಭಾವಿಸಲಾದ ಪ್ರಾತಿನಿಧಿಕ ಪರಿಣಾಮಕಾರಿತ್ವವನ್ನು ಕಡಿಮೆ ಮಾಡಿ, ಪ್ರಜಾಪ್ರಭುತ್ವದ ಸದ್ಗುಣಗಳನ್ನು ಹೀನೈಸಿದರು. ಪರ್ಯಾಯವಾಗಿ ಸಮತಾವಾದವನ್ನು ಅನಿವಾರ್ಯವಾಗಿ ಸೋಲಲಿರುವ ನೋವು ನಿವಾರಕಕ್ಕೆ ಹೋಲಿಸಿದರು: ಅಲ್ಲದೆ ಸಮತಾವಾದ ಅದರ ಆಯಾಮಗಳಲ್ಲಿ ಹಿಂಸಾತ್ಮಕ ಹಾಗೂ ಧಾಟಿಯಲ್ಲಿ ನಿರೀಶ್ವರವಾದಿ. ಅವರು ಸೂಚಿಸುವ ಪ್ರಕಾರ ಭಾರತಕ್ಕೆ ಬೇಕಾದುದು ಒಂದು ಶುದ್ಧವಾದ, ನೈತಿಕವಾದ, ಸ್ವಯಂ ಶಿಸ್ತಿನ ಪಥಕ್ಕೆ ಮರಳುವುದು.

೧೯೪೫ರ ಶರತ್ಕಾಲದಲ್ಲಿ ಅವರು ಈ ಉಪಖಂಡದ ಬಗೆಗಿನ ತಮ್ಮ ಕನಸನ್ನು ವಿವರಿಸಿ ನೆಹರೂ ಅವರಿಗೆ ಪತ್ರವೊಂದನ್ನು ಬರೆದರು. “ನಾನು ನಂಬುವುದೆಂದರೆ,” ನಾವು ತತ್‌ಕ್ಷಣವೋ ಅಥವಾ ನಿಧಾನವಾಗಿಯೋ ಹಳ್ಳಿಗಳಿಗೆ ಹೋಗಿ ಗುಡಿಸಲುಗಳಲ್ಲಿ ವಾಸ ಮಾಡಬೇಕಾಗುತ್ತದೆ... ಯಾರನ್ನೂ ಸಹ ಸೋಮಾರಿತನದಲ್ಲಿಯೋ, ಐಷಾರಾಮಿಯಾಗಿಯೋ ಇರಲು ಬಿಡುವಂತಿಲ್ಲ. ಪ್ರತಿಯೊಬ್ಬರೂ ದೈಹಿಕ ಶ್ರಮವನ್ನು ಮಾಡಬೇಕು.”[xli] ಆಧುನಿಕತೆಯನ್ನು ತೊಲಗಿಸುವುದರೊಂದಿಗೆ ಭಾರತವು ನಾಗರಿಕ ಕಾಯಿದೆಗಳ ಬೋನಿನಿಂದ ಆಘಾತಗೊಳ್ಳದ ಒಂದು ಹೊಸ ಕಾಲವನ್ನು ಪ್ರಾರಂಭಿಸುವುದರಲ್ಲಿ ಯಶಸ್ವಿಯಾಗುವುದು ಎಂದು ಅವರು ಭರವಸೆ ಹೊಂದಿದ್ದರು. ಇಂದು, ಅವರ ಮರಣದ ಆರು ದಶಕಗಳ ನಂತರ, ಭಾರತವು ಪ್ರಪಂಚದ ಹೆಮ್ಮೆಯ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಒಂದು ಸಮರ್ಥವಾದ ಜಾಗತೀಕರಣ-ಗೊಂಡ ಆರ್ಥಿಕತೆಯನ್ನು ಹೊಂದಿದೆ. ಸ್ವಾತಂತ್ರ್ಯವು ಗಾಂಧಿಯವರ ದೃಷ್ಟಿಕೋನಕ್ಕೆ ಸಮಾನಾಂತರವಾಗಿಲ್ಲ. ಅವರು ಜೀವನದುದ್ದಕ್ಕೂ ವಿರೋಧಿಸಿದ ಪಾಶ್ಚಾತ್ಯ ಮಾದರಿಯನ್ನು ಅನುಸರಿಸಿದೆ. ಗಾಂಧಿಯವರು ವ್ಯಾಖ್ಯಾನಿಸಿದ ನಿಜವಾದ ಸ್ವಯಂ ಆಡಳಿತವು *ಹಿಂದ್ ಸ್ವರಾಜ್* ಮತ್ತು *Collected Works* ನ ಪುಟಗಳಿಗೆ ಸೀಮಿತವಾಗಿದೆ.

---

[i] As Judith Brown writes, “He seems to have visualized a loose linkage of independent village republics as the ideal form of the state… he can therefore properly be called an anarchist.” Judith Brown, Modern India: The Origins of an Asian Democracy, (Oxford: Oxford University Press, 1990), 205

[ii] 2 Jawarharlal Nehru, Towards Freedom: The Autobiography of Jawaharlal Nehru, (New York: John Day, 1941), 76.

[iii] 3 Anthony Parel “Introduction” in A. Parel, ed., Hind Swaraj: And Other Writings, (Cambridge: Cambridge University Press, 1997), xiii

[iv] 4 Rudrangshu Mukherjee, ed., The Penguin Gandhi Reader, (London: Penguin Books Ltd., 1993), x.

[v] Anthony Parel, “Introduction” in A. Parel, ed., Hind Swaraj: And Other Writings, xxx.

[vi] Gandhi, “Hind Swaraj” in Parel, ed., Hind Swaraj: And Other Writings, 39.

[vii] Parel, “Introduction”, xvi.

[viii] Mukherjee, xiv.

[ix] Brown, 205.

[x] "Interview to Francis Hickman", Collected Works, 17 Sep. 1940. See Chatterjee, Nationalist Thought and the Colonial World, 88.

[xi] Nehru, Towards Freedom: The Autobiography of Jawaharlal Nehru, 52. See: Mukherjee, x.

[xii] "Is Khadi Economically Sound?", Collected Works, Vol. 63, 77. See: Partha Chatterjee, "Gandhi and the Critique of Civil Society" in Ranajit Guha, ed., Subaltern Studies III: Writings on South Asian History and Society, (Oxford: Oxford University Press, 1989), 161. Emphasis added.

[xiii] Chistophe Jaffrelot, India's Silent Revolution: The Rise of the Lower Castes in North India, (London: Hurst & Company, 2003), 27.

[xiv] "Why Not Labor Saving Devices?", Collected Works, Vol. 59, 356. See Chatterjee, Nationalist Thought and the Colonial World, 89.

[xv] Gandhi, "Hind Swaraj", 37.

[xvi] Gandhi, "Hind Swaraj", 30.

[xvii] Gandhi, "Hind Swaraj", 33.

[xviii] Speech delivered 11 Dec. 1924, Mukherjee, 237.

[xix] "Extract from an Interview with Nirmal Kumar Bose", 9-10 Nov. 1935. See: Mukherjee, 243.

[xx] "Enlightened Anarchy: A Political Ideal", Collected Works, Vol. 59, 45. See: Chaterjee, Nationalist Thought and the Colonial World, 92.

[xxi] Gandhi, Gandhi, An Autobiography: The Story of My Experiments with Truth, Madadev Desai, tr., (London: Phoenix Press, 1949), xii and 420.

[xxii] Chaterjee, Nationalist Thought and the Colonial World, 121.

[xxiii] Gandhi, "Independence", Collected Works, Vol. 85, 460. See: Chatterjee, "Gandhi and the Critique of Civil Society" in Guha, ed., Subaltern Studies III, 161.

[xxiv]Chaterjee, Nationalist Thought and the Colonial World, 119.

[xxv]Brown, 205.

[xxvi]Ibid

[xxvii] Mukherjee, 13.

[xxviii] Chaterjee, Nationalist Thought and the Colonial World, 92.

[xxix] Chatterjee, "Gandhi and the Critique of Civil Society" in Guha, ed., Subaltern Studies III, 189.

[xxx]ibid

[xxxi] Gandhi, "If I Were the Minister", Collected Works, Vol. 85, 211. See: Chaterjee, Nationalist Thought and the Colonial World, 115.

[xxxii] Ibid

[xxxiii] Jaffrelot, 25.

[xxxiv] Jaffrelot, 17.

[xxxv] Ibid

[xxxvi] Mukherjee, xv.

[xxxvii] Parel, "Introduction", xvi.

[xxxviii] Parel, "Introduction", xxxii.

[xxxix] Brown, 206.

[xl] Gandhi, “Hind Swaraj” in Parel, ed., Hind Swaraj: And Other Writings, 42.

[xli] Gandhi, “Extract from a Letter to Nehru”, (5 Oct. 1945) in Mukherjee, 289.